**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 3837/2021**

| | | | |
|---|---|---|---|
| **ಹೆಸರು** | : | **ಡಾ. ಲೊಕೇಶ** | ಚಾ.ಸಾ. 8 |
| **ತಂದೆಯ ಹೆಸರು** | : | **ಬಾಬುರಾವ** | ಪ್ರಾ.ಸಾ. 7 |
| **ವಯಸ್ಸು** | : | **42 ವರ್ಷ** | ದಿನಾಂಕಃ 09-09-2025 |
| **ಉದ್ಯೋಗ** | : | **ವೈದ್ಯಧಿಕಾರಿ** | |
| **ವಾಸಸ್ಥಳ** | : | **ಬೀದರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

2020 ರಿಂದ 2023 ರವರೆಗೆ ಸರಕಾರಿ ಆಸ್ಪತ್ರೆ ಚಿಂಚೋಳಿಯಲ್ಲಿ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 07-07-2021 ಸಾಯಂಕಾಲ 06.45 ಗಂಟೆಗೆ ಚಾಸಾ-1 ರವರು ನಮ್ಮ ಆಸ್ಪತ್ರೆಗೆ ಹಲ್ಲೆಯ ಹಿನ್ನೆಲೆಯಲ್ಲಿ ಬಂದಿದ್ದು ಅವರಿಗೆ ತಪಾಸಣೆ ಮಾಡಿ ನೋಡಿದಾಗ ಮೇಲ್ನೊಟಕ್ಕೆ ಯಾವುದೇ ಗಾಯ ಕಂಡುಬಂದಿರುವುದಿಲ್ಲ. ಚಾಸಾ-1 ರವರು ತಮ್ಮ ಬಲಗೈ ಮೊಳಕೈ ಹಾಗೂ ಕುತ್ತಿಗೆ ಭಾಗಕ್ಕೆ ನೋವು ಇದೆ ಎಂದು ತಿಳಿಸಿರುತ್ತಾರೆ. ಸದರಿ ನೋವು ಸ್ವರೂಪದ ಗಾಯವಾಗಿದ್ದು ಅದರಂತೆ ನಾನು ಈಗ ನೋಡುತ್ತಿರುವ ಗಾಯದ ಪ್ರಮಾಣ ಪತ್ರ ನೀಡಿದ್ದೇನೆ. ಸದರಿ ಗಾಯ ಪ್ರಮಾಣ ಪತ್ರವನ್ನು ನಿಪಿ-10 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಮಾನ್ಯವಾಗಿ ಗಟ್ಟಿ ವಸ್ತುವಿನಿಂದ ಹೊಡೆದಾಗ ಅಥವಾ ನೇಲದ ಮೇಲೆ ಬಿದ್ದಾಗ ನಿಪಿ-10ರಲ್ಲಿರುವ ನೋವುಗಳು ಆಗಬಹುದು.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ SNB ವಕೀಲರಿಂದಃ-</u>**

ಆ ದಿನ ಚಾಸಾ-1ರವರು ಒಬ್ಬರೇ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಒಬ್ಬರೇ ಬಂದಿರುತ್ತಾರೆ ಎಂದು ನಿಪಿ-10ರಲ್ಲಿ ಉಲ್ಲೇಖ ಮಾಡಿಲ್ಲ. ನಿಪಿ-10 ರಲ್ಲಿ ಚಾಸಾ-1ರವರ ಗುರುತಿನ ಚಿಹ್ನೆಗಳನ್ನು ಉಲ್ಲೇಖ ಮಾಡಿಲ್ಲ. ಚಾಸಾ-1ರವರ ಮೇಲೆ ಯಾವುದೇ ಕಂದು ಗಟ್ಟಿದ ಗಾಯ ಕಂಡು ಬಂದಿರುವುದಿಲ್ಲ. ನಿಪಿ-10 ರಲ್ಲಿ ಆವಾಕ ಮತ್ತು ಜಾವಕ ಸಂಖ್ಯೆಯನ್ನು ಉಲ್ಲೇಖ ಮಾಡಿಲ್ಲ. ಸಾಕ್ಷಿ ಮುಂದುವರೆದು MLC ಸಂಖ್ಯೆ ಉಲ್ಲೇಖ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಚಾಸಾ-1ರವರಿಗೆ ಸಹಾಯ ಮಾಡಲು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**